

ರೆಸಾರ್ಟ್. ಹೆನ್ರಿ ತಂದೆ ಜಾಕ್ಸನ್ ಫಾದರ್ ಆಗಿ ತಮ್ಮ ಇಡೀ ಜೀವನವನ್ನು ಕ್ರೈಸ್ತ ಧರ್ಮದ ಪ್ರಚಾರ, ಪ್ರಸಾರ ಮಾಡಲು ಕಳೆದರು. ಭಾರತ ಸ್ವತಂತ್ರವಾದ ನಂತರವೂ ಅವರು ಮತ್ತೆ ತಮ್ಮ ದೇಶಕ್ಕೆ ಹೋಗದೆ ಈ ಪ್ರಾಪರ್ಟಿಯನ್ನು ತಗೊಂಡು ನೆಲೆ ನಿಂತರು. ಅವರ ಪತ್ನಿಗೆ ಈ ದೇಶ ಇಷ್ಟವಿರಲಿಲ್ಲ. ಹೆನ್ರಿ ಹುಟ್ಟುವವರೆಗೆ ಇದ್ದು ನಂತರ ಮಗನೊಂದಿಗೆ ವಿದೇಶಕ್ಕೆ ಹೋದ ಆಕೆ ಮತ್ತೆ ಇಲ್ಲಿಗೆ ಬಂದದ್ದು ಕೊನೆಗಾಲದಲ್ಲಿಯೇ.

ಹೆನ್ರಿ ತಂದೆ–ತಾಯಿ ಸಮಾಧಿಯನ್ನು ಇಳವರಸಿ, ಮುಜೀದ್‌ಗೆ ಕರೆದುಕೊಂಡು ಹೋಗಿ ತೋರಿಸಿದಳು. 'ಹೆನ್ರಿಗೆ ಮದುವೆಯಾಗಿತ್ತಾ' ಮುಜೀದ್ ಕೇಳಿದ. 'ಬರೋರು, ಅವರು ಯಾರು ಅಂತಾನು ಗೊತ್ತಾಗ್ತಾ ಇರಲಿಲ್ಲ. ಅದೆಲ್ಲ ಮೇನೇಜರ್‌ಗೆ ಕೇಳಬೇಕು' ಎಂದು ತನ್ನ ರವಿಕೆಯನ್ನು ಸರಿಸಿ ತನ್ನ ಮೊಲೆಗಳ ಮರೆಯಲ್ಲಿ ಇಟ್ಟಿದ್ದ ಚೀಲ ತೆಗೆದು ಅದರಿಂದ ಎಲೆ–ಅಡಿಕೆ ಮಡಿಚಿಟ್ಟಿದ್ದನ್ನು ಬಾಯಿಗೆ ಸೇರಿಸಿದಳು. ಅವಳ ತುಂಬು ಮೊಲೆಯನ್ನು ನೋಡುತ್ತಲೇ ಮುಜೀದ್, 'ಹೆನ್ರಿ ಸಾಹೇಬರಿಗೆ ಯಾರಾದರೂ ಹೆಂಗಸರ ಸಹವಾಸ ಇತ್ತಾ?' ಎಂದ. 'ಅವರಂತವರಲ್ಲ' ಎಂದಳು.

ಎಪ್ಪತ್ತೊಂದು ವರ್ಷದ ಹೆನ್ರಿ ಸಾಹೇಬರು ಎಲ್ಲರಿದ್ದೂ ಯಾರೂ ಇಲ್ಲದಂತೆ ಅನಾಥವಾಗಿ ಕ್ರೈಸ್ತಧರ್ಮದಂತೆ ಮಣ್ಣಾದರು. ಪೋಸ್ಟ್‌ಮಾರ್ಟಂ ರಿಪೋರ್ಟ್ ಪ್ರಕಾರವೂ ಹಾವು ಕಚ್ಚಿದ್ದು ಸಾಬೀತಾಗಿತ್ತು.

ಹೆನ್ರಿ ಸತ್ತ ಮೇಲೆ ಅವರ ಆಸ್ತಿ ಹೊಡೆಯಲು ರಾಜಕಾರಣಿಗಳಿಂದ ಹಿಡಿದು, ಬೇರೆ ರೆಸಾರ್ಟ್ ಮಾಲೀಕರೂ ಕಣ್ಣಾಕಲಾರಂಭಿಸಿದ ದಿನಗಳಲ್ಲಿಯೇ, ಮುಜೀದ್ ಇದ್ದ ಸ್ಟೇಷನ್‌ಗೆ ಬೇನಾಮಿ ಪತ್ರವೊಂದು ತಲುಪಿತ್ತು. ಅದರಲ್ಲಿ, 'ಹೆನ್ರಿ ಸಾವು ಸಹಜ ಸಾವಲ್ಲ. ದಯವಿಟ್ಟು ತನಿಖೆ ಮಾಡಿ' ಎಂದಿತ್ತು. ಹೆಸರಿಲ್ಲದ ಪತ್ರ, ಅಕ್ಷರ ಪತ್ತೆ ಮಾಡೋಣ ಎಂದರೆ ಅದು ಟೈಪ್ ಮಾಡಿಸಿದ ಪತ್ರ. ಒಂದು ಕ್ಷಣ ಐಸ್‌ನಲ್ಲಿ ಅದ್ದಿ ತೆಗೆದಂತೆ ತಣ್ಣಗೆ ಕುಳಿತ. ಅದೆಲ್ಲಿಂದಲೋ ರೇಡಿಯೊದಲ್ಲಿ ತೇಲಿ ಬರುತ್ತಿದ್ದ ಗಾನ,

ಜೀವನದಲ್ಲಿ ಕೆಲವು ಸತ್ಯಗಳು ಸತ್ತದ ಕಟ್ಟಡದಲ್ಲಿ ಹಲವು ಮಾತಾಡುವ ಕಿಟಕಿಗಳು ಮಾತಾಡದೆ ಹೇಳುತ್ತಿವೆ ಮಾಣಿಕ್ಯದಂತಹ ಮಾತುಗಳು...

* * *

ಸಹಜ ಸಾವಲ್ಲ ಸಹಜ ಸಾವಲ್ಲ ಮುಜೀದ್‌ನ ತಲೆಯಲ್ಲಿ, ಕಿವಿಯಲ್ಲಿ, ಕಣ್ಣಲ್ಲಿ ಇದೇ ಪದಗಳು. ಹೆನ್ರಿ ಹಾವು ಕಚ್ಚಿ ಸತ್ತದ್ದು ಎಂದಿದ್ದರೂ ಸಹಜ ಸಾವಲ್ಲ ಎನ್ನಲು ಕಾರಣವೇನು? ಮುಜೀದ್ ತನ್ನ ತಲೆಯೇ ಸಿಡಿದುಹೋಗುತ್ತದೆ ಎನ್ನುವಾಗ ಬೈಕ್ ಹತ್ತಿ ಡಾ. ಸುಂದರಂ ಅವರನ್ನು ನೋಡಲು ಆಸ್ಪತ್ರೆಗೆ ಬಂದ.

'ದೇಹದ ಮೇಲೆ ಮತ್ತೇನಾದರೂ ಕುರುಹುಗಳಿದ್ದವೆ?' ಎಂದ.

'ಹಾಗೇನಿಲ್ಲ, ನಿಮಗ್ಯಾಕೆ ಇದ್ದಕ್ಕಿದ್ದಂತೆ ಇಂತಹ ಅನುಮಾನ?' ಎಂದು ಡಾಕ್ಟರ್ ಕೇಳಿದರು.

ಮುಜೀದ್ ತನ್ನ ಜೇಬಿನಲ್ಲಿ ಹೆಣದಂತೆ ಹೊತ್ತು ತಿರುಗುತ್ತಿದ್ದ ಪತ್ರವನ್ನು ತೆಗೆದು ತೋರಿಸಿದ. ಅದನ್ನು ಓದಿ ಕ್ಷಣಕಾಲ ಮೌನಕ್ಕೆ ಜಾರಿದ ಸುಂದರಂ, 'ನನಗೆ ಚೆನ್ನಾಗಿ ಜ್ಞಾಪಕ ಇದೆ, ಅಂತಹ ಕುರುಹುಗಳೇನೂ ಇಲ್ಲ' ಎಂದು ನುಡಿದರು. ಅವರ ಮಾತಿನಲ್ಲಿ ಕಾನ್ಫಿಡೆನ್ಸ್ ಇತ್ತು. 'ನಾಳೆ ಸಂಜೆ ಬನ್ನಿ, ಪೋಸ್ಟ್‌ಮಾರ್ಟಂ ಮಾಡಿದ ರೆಕಾರ್ಡಿಂಗ್ ವಿಡಿಯೊವನ್ನೊಮ್ಮೆ ಇಬ್ಬರು ಒಟ್ಟಿಗೆ ನೋಡೋಣ' ಎಂದು ಎದ್ದರು. ಮುಜೀದ್ ಟೀ ಗ್ಲಾಸ್ ಕೆಳಗಿಟ್ಟು ಕೈಕುಲುಕಿ ಹೊರಬಂದ.

ಅವನ ಬೈಕು ವ್ಯಾಲಿ ರೆಸಾರ್ಟ್‌ಗೆ ಬಂದಾಗ ಇಳಿಸಂಜೆ. ರಿಸೆಪ್ಷನ್ ಕೌಂಟರ್‌ನಲ್ಲಿದ್ದ ಮ್ಯಾನೇಜರ್ ಓಡೋಡಿ ಬಂದ. 'ಹೆನ್ರಿ ಸಾಹೇಬರ ಮನೆ ನೋಡಬೇಕು ತೋರಿಸು ಬಾ' ಎಂದ ಮುಜೀದ್‌ಗೆ – 'ನಡೀತಾ ಇರಿ ಸಾರ್, ಕೀ ತರುವೆ' ಎಂದು ಒಳಹೋದ.

ಕೊಡೈನಲ್ಲಿ ಇಂದು ನಾಯಿಕೊಡೆಗಳಂತೆ ರೆಸಾರ್ಟ್‌ಗಳು ಆಗಿದ್ದರೂ ವ್ಯಾಲಿ ರೆಸಾರ್ಟ್ ತನ್ನ ಪುರಾತನ ಶೈಲಿಯ ಮನೆ, ವಿಸ್ತಾರವಾದ ಕಾಟೇಜ್‌ಗಳು ಹಾಗೂ ಕೊಳ, ಹತ್ತಿರದಲ್ಲಿರುವ ಗುಡ್ಡ, ಎಸ್ಟೇಟ್‌ನಿಂದಾಗಿ ಪ್ರಸಿದ್ಧಿಯಾಗಿದೆ. ಕಾಫಿ ಬೆಳೆ ಪಾತಾಳಕ್ಕಿಳಿದು, ಕೂಲಿಕಾರರು ಸಿಗದೆ ಇದ್ದಾಗ ಹೆನ್ರಿ ಸಾಹೇಬರು ಕೆಲಭಾಗವನ್ನು ರೆಸಾರ್ಟ್ ಆಗಿ ಪರಿವರ್ತಿಸಿದ್ದರು.

ಮುಜೀದ್ ಸೂರ್ಯಾಸ್ತದ ಸೊಬಗನ್ನು ಆಸ್ವಾದಿಸುತ್ತಿದ್ದ. ಇಳವರಸಿ ಬಿಸಿಬಿಸಿ ಟೀ ಕೊಟ್ಟಳು. 'ಹೆನ್ರಿ ಸಾಹೇಬರು ಸತ್ತ ಜಾಗ ನೋಡೋಣ' ಎಂದ. 'ಅದೆಷ್ಟು ಸಲ ನೋಡಿದ್ರು ಅಷ್ಟೇ. ಅಂಗೈ ಹುಣ್ಣಿಗೆ ಕನ್ನಡಿ ಬೇಕಾ?' ಎನ್ನುವ ಅವಳ ಮಾತಿಗೆ ಕಿವಿಕೊಡದೆ ಮುಜೀದ್ ಕಾಲುದಾರಿಯಲ್ಲಿ ನಡೆಯಲಾರಂಭಿಸಿದ. ಇಳವರಸಿ ಅವನನ್ನೇ ಹಿಂಬಾಲಿಸಿ, 'ಸಾಮಿ, ಗಾಳಿ ಗುದ್ದಿ ಮೈ ನೋಯಿಸಕಂಡಂಗೆ ನೀವು ಮತ್ತೆ ಮತ್ತೆ ಆ ಜಾಗ ನೋಡಿ ಏನ್ ಮಾಡಿರೀ?' ಎಂದಳು. ಆಕೆಯ ಮಾತಿಗೆ ಉತ್ತರಿಸದೆ ಮುಜೀದ್ ಕೊಳದ ಬಳಿ ಬಂದು ಸುತ್ತಲೂ ನೋಡಿದ.

ಆಕಾಶವೆಲ್ಲ, ಯುದ್ಧ ಮುಗಿಸಿ ವೈರಿಗಳನ್ನು ಕೊಂದ ರಕ್ತವೆಲ್ಲಾ ಅಡರಿದಂತೆ ಕೆಂಬಣ್ಣದಿಂದ ಕಂಗೊಳಿಸುತ್ತಿತ್ತು. ಕತ್ತಲು ನಿಧಾನಕ್ಕೆ ಕಾಲಿಡುತ್ತಿರುವಂತೆ ಮಂದ ಬೆಳಕು, ಸ್ವಚ್ಛವಾದ ಕೊಳದಲ್ಲಿ ತಾವರೆ ಹೂವುಗಳು ಅರಳಿದ್ದವು. ಜೋಡಿ ಬಾತುಕೋಳಿಗಳು ಏನೂ ಅಲ್ಲಿ ಘಟಿಸಿಯೇ ಇಲ್ಲವೆಂಬಂತೆ ಈಜಾಡುತ್ತಿದ್ದವು. ಅದು ಫೆಬ್ರುವರಿ ಮಾಸವಾಗಿದ್ದರಿಂದ ಕೊಳದ ಸುತ್ತಲಲ್ಲಿದ್ದ ಬೃಹತ್ ಮರಗಳು ಎಲೆಗಳನ್ನೆಲ್ಲಾ ಉದುರಿಸಿ ಬೆತ್ತಲಾಗಿ ನಿಂತಿದ್ದವು.

ಬ್ರಿಟಿಷ್ ಬಂಗಲೆ ಎಂದರೆ ಹೇಗಿರಬೇಕೋ ಹಾಗಿತ್ತು ಆ ಮನೆ. ವಿಶಿಷ್ಟವಾದ ವಾಸ್ತುಶಿಲ್ಪ ಶೈಲಿಯಲ್ಲಿನ ಮಣ್ಣಿನ ಇಟ್ಟಿಗೆಗಳು ಮತ್ತು ಮರವನ್ನು ಬಳಸಿ ನಿರ್ಮಿಸಲಾದ ವ್ಯಾಲಿ ಬಂಗಲೆಯ ಪ್ರತಿ ಮೂಲೆಯನ್ನೂ ಅದರ ಮೂಲದ ಭವ್ಯತೆಯನ್ನು ಪ್ರತಿಬಿಂಬಿಸುವಂತೆ ಸೂಕ್ಷ್ಮವಾಗಿ ರಚಿಸಲಾಗಿದೆ. ಜಾಕ್ಸನ್ ತಾನು ಮತ್ತೆ ಬ್ರಿಟನ್‌ಗೆ ಹಿಂದಿರುಗುವುದಿಲ್ಲ ಎಂದು ನಿರ್ಧರಿಸಿದ ಮೇಲೆ ಸ್ಥಳೀಯ ಕೆಲಸಗಾರರಿಂದ ಈ ಬಂಗಲೆಯನ್ನು ನಿರ್ಮಿಸಿದ್ದರು.

ಪಾಶ್ಚಿಮಾತ್ಯ ಶೈಲಿಯ ವರಾಂಡ, ವಿಶಾಲವಾದ ಹಾಲ್‌ನ ಮೂರು ಬದಿಗೂ ಮರದ ಕೆತ್ತನೆಯ ಸಣ್ಣ ಟೀಪಾಯಿಗಳು, ಅದರ ಮೇಲೆ ಚೀನಿ ಕಲೆಯ ಆಲಂಕಾರಿಕ ವಸ್ತುಗಳು, ಪುರಾತನ ಶೈಲಿಯ ಸೋಫಾಗಳು, ಹೂಜಿ, ಟಿ–ಸೆಟ್‌ಗಳು, ಕಾಡೆಮ್ಮೆಯ ಮುಖ, ಸಾರಂಗದ ಕೋಡುಗಳು, ಹೆನ್ರಿ ಕಲಾತ್ಮಕತೆಗೆ ನಿದರ್ಶನದಂತೆ ಮನೆ ಇತ್ತು. ಮನೆಯೊಳಗೆಲ್ಲಾ ಓಡಾಡಿದ ಮುಜೀದ್ ತನಗೇನಾದರೂ ಸುಳಿವು ಸಿಗಬಹುದೇನೋ ಎಂಬಂತೆ ಸೂಕ್ಷ್ಮವಾಗಿ ನೋಡಿದ. ಅಂತಹ ಯಾವ ಸುಳಿವೂ ಅವನಿಗೆ ಸಿಗಲಿಲ್ಲ. ಇನ್ನು ಕೆಲಸ ಮಾಡುವಂತೆ ಕಾಣುತ್ತಿದ್ದ ಅಗ್ಗಿಷ್ಟಿಕೆಯನ್ನು ಮತ್ತೆ ಮತ್ತೆ ಗಮನಿಸಿದ. ಆ ಗೋಡೆಗಳ ಮೇಲೆಲ್ಲಾ ಪ್ರಾಣಿ, ಪಕ್ಷಿಗಳ, ಸೂರ್ಯೋದಯ ಮತ್ತು ಸೂರ್ಯಾಸ್ತದ ಚಿತ್ರಗಳು. ಹೆನ್ರಿಯೇ ಫೋಟೊ ತೆಗೆದು ಫ್ರೇಮಿನ ಮೇಲೆ ದಿನಾಂಕವನ್ನು ಗುರುತಿಸಿದ್ದ. 'ಫ್ಯಾಮಿಲಿ ಫೋಟೋ ಎಲ್ಲಯ್ಯ' ಎಂದದ್ದಕ್ಕೆ, ಆಲ್ಬಮ್ ಅನ್ನು ಮ್ಯಾನೇಜರ್ ತಂದಿಟ್ಟ. ಕುಟುಂಬದ